# ಆಹಾ ಸುದ್ದಿ!

★ ಸಸಿತೋಟ



ಗಂಡನ ಮೇಲಿನ ಸಿಟ್ಟನ್ನು ತೀರಿಸಿಕೊಳ್ಳಲು ಹೆಂಡತಿಗೆ ಸಿಗುವ ಸುಲಭ ಆಯುಧವೆಂದರೆ ದಿಂಬು ಎನ್ನುತ್ತಾರೆ ಬಲ್ಲವರು. ಚೀನಾದ ಚಾಂಗ್‌ಶಾ ಪ್ರಾಂತ್ಯದಲ್ಲಿ ಈ 'ಪಿಲ್ಲೋ ಫೈಟ್' ಅನ್ನೇ ಬೆಡ್‌ರೂಮಿನಿಂದ ಬೀದಿಗೆ ತಂದಿದ್ದಾರೆ. ಒತ್ತಡವನ್ನು ಹೊರಹಾಕಲು ನೂರಾರು ದಿಂಬುಗಳ ಹೂರಣ ಬೀದಿಯಲ್ಲಿ ಚೆಲ್ಲಾಡಿತು. ಬೆಡ್‌ರೂಮಿನ ರಹಸ್ಯವನ್ನು ಈ ರೀತಿ ಬಹಿರಂಗ ಮಾಡಬಾರದಿತ್ತು.

ನಿಮ್ಮ ಮುದ್ದು ಪ್ರಾಣಿಗಳನ್ನು ನೀವು ಎಷ್ಟೊಂದು ಪ್ರೀತಿ, ಕಾಳಜಿ ಮಾಡುತ್ತೀರಿ. ಬದಲಾಗಿ ಅವೂ ನಿಮ್ಮ ಕೆಲಸ ಮಾಡಿಕೊಡಬೇಡವೇ? ಅದಕ್ಕೇ ಕಂಪೆನಿಯೊಂದು 'ಪೆಟ್ ಸ್ವೀಪ್' ಅಂದರೆ ನಿಮ್ಮ ಮುದ್ದು ಪ್ರಾಣಿಗಳು ಮನೆಯ ನೆಲ ಒರೆಸಿಕೊಡುವ ಸಾಮಗ್ರಿಗಳು ಬಂದಿವೆ ಎಂದು ಫೇಸ್‌ಬುಕ್‌ನಲ್ಲಿ ಈ ಚಿತ್ರ ಪ್ರಕಟಿಸಿತು. ಸಂಬಳ ಹೆಚ್ಚಳ, ಬಡ್ತಿ ಬೇಡದ ಕೆಲಸದವರು ಯಾರಿಗೆ ಬೇಡ ಹೇಳಿ? ಬೇಡಿಕೆಯ ಮಹಾಪೂರ. ಬೇಡಿಕೆ ಇಟ್ಟವರಿಗೆಲ್ಲ ಬಂದಿದ್ದು ಖಾಲಿ ಬಾಕ್ಸ್! ಏಪ್ರಿಲ್ ಪೂರ್ವದ ಫೂಲ್!



ಚೀನಾದ ಚೆಂಗ್ಡು ದೈತ್ಯ ಪಾಂಡಾ ಸಂಶೋಧನ ಕೇಂದ್ರದಲ್ಲಿ ಹೆಣ್ಣು ಪಾಂಡಾ ಲಿನ್ ಏನೇ ಮಾಡಿದರೂ ಸಂಗಾತಿ ಯಾಂಗ್‌ಯಾಂಗ್‌ಗೆ ಸಮೀಪ ಸುಳಿಯಲು ಬಿಡುತ್ತಿರಲಿಲ್ಲವಂತೆ. ಸಂಶೋಧಕರು ಲಿನ್ ವೈದ್ಯಕೀಯ ಪರೀಕ್ಷೆ ಮಾಡಲು ಹೋಗಲಿಲ್ಲ. ಬದಲಾಗಿ ಪಾಂಡಾಗಳ ಮಿಲನದ ದೃಶ್ಯಗಳ ವಿಡಿಯೋ ತೋರಿಸಿದರಂತೆ. ಲಿನ್ ತಾನಾಗೇ ಯಾಂಗ್‌ಯಾಂಗ್ ಅನ್ನು ಹುಡುಕಿಕೊಂಡು ಹೋಯಿತಂತೆ. ಮಾನವರು ಇಂತಹ ವಿಡಿಯೋ ನೋಡಿದರೆ.. 'ಕೆಟ್ಟು ಹೋದ' ಎಂಬ ಪಟ್ಟ.



ಅಮೆರಿಕಾದ ಒಹಿಯೋದ ರೇಬಾ ವಿಲಿಯಮ್ಸ್‌ಗೆ ಈಚೆಗೆ ಶಾಲೆಯ ಡಿಪ್ಲೊಮ ಸರ್ಟಿಫಿಕೇಟ್ ನೀಡಲಾಯಿತು. ಅದರಲ್ಲೇನು ವಿಶೇಷ ಅಂತೀರಾ. ಆಕೆಗೆ ಬರೋಬ್ಬರಿ 106 ವರ್ಷ. 1925ರಲ್ಲಿ 12ನೇ ಗ್ರೇಡ್ ಮುಗಿಸಿದ್ದಳು. ಒಮ್ಮೆ ಓದಿದ ಪಾಠವನ್ನೇ ಇನ್ನೊಮ್ಮೆ ಓದೆಂದು ಹೇಳಿದ್ದ ಶಿಕ್ಷಕಿಯ ಆದೇಶ ಪಾಲಿಸಲು ಒಲ್ಲೆ ಎಂದಿದ್ದರಿಂದ ರೇಬಾಗೆ ಡಿಪ್ಲೊಮ ನಿರಾಕರಿಸಲಾಗಿತ್ತಂತೆ. ಪಾಠ ಕಲಿತಿದ್ದು ರೇಬಾಳೇ ಅಥವಾ ಶಿಕ್ಷಕಿಯೇ?



ಬ್ರಿಟನ್ನಿನ ಚೆಸ್ಟರ್ ಮೃಗಾಲಯದಲ್ಲಿ ಜನಿಸಿದ ಚಿಕಣಿ ಜಿಂಕೆ. ಎತ್ತರ ಕೇವಲ 20 ಸೆಂ.ಮೀ. ಮಕ್ಕಳಿಗೆ ಆಟವಾಡಲು ಜೀವಂತ ಬೊಂಬೆ. ತಾನು ಮಾತ್ರ ಇನ್ನೂ ಎತ್ತರ.. ಎತ್ತರ.. ಎಂದು ಉದ್ದಕ್ಕೆ ಬೆಳೆಯಲು ಏನೆಲ್ಲಾ ಕಸರತ್ತು ನಡೆಸುವ ಮನುಷ್ಯ ತನ್ನ ಮೋಜಿನ ಸಲುವಾಗಿ ಬೇರೆ ಎಲ್ಲವುಗಳ ಜೊತೆ ಆಟವಾಡುತ್ತಿದ್ದಾನೆ.

ಆಸ್ಟ್ರೇಲಿಯಾ ಪ್ರವಾಸೋದ್ಯಮ ಇಲಾಖೆ 'ವಿಶ್ವದಲ್ಲೇ ಅತ್ಯುತ್ತಮ ಉದ್ಯೋಗ'ಕ್ಕಾಗಿ ಅರ್ಜಿ ಆಹ್ವಾನಿಸಿದ್ದು 85,000 ಅರ್ಜಿಗಳು ಬಂದಿವೆಯಂತೆ. ಅಷ್ಟಕ್ಕೂ ಈ ಉದ್ಯೋಗಿಯ ಕೆಲಸವೇನು ಗೊತ್ತೇ? ಪಾರ್ಟಿಗಳಿಗೆ ನುಗ್ಗುವುದು, ತಿಂದು- ಕುಡಿದು ಮಾಡುವುದು, ಬೀಚ್‌ಗಳಿಗೆ ಭೇಟಿ ನೀಡುವುದು.. ಇದೂ ಒಂದು ಉದ್ಯೋಗವೇ ಎಂದು ಮೂಗು ಮುರಿಯುವ ಮುನ್ನ ಸಂಬಳ ಎಷ್ಟೆಂದು ಕೇಳಿ. ತಿಂಗಳಿಗೆ ಒಂದು ಲಕ್ಷ ಡಾಲರ್! ಏನು ಮಾಡುವುದು? ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ ಮುಗಿದು ಹೋಗಿದೆ.